ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 6, January-February 2024, Pp. 35-38
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಗ್ರಾಮೀಣಾಭಿವೃದ್ಧಿಯಲ್ಲಿ ಪುರ (PURA) ಯೋಜನೆಯ ಪಾತ್ರ

**ಡಾ. ಸಂಗನಗೌಡ ಶಿವನಗೌಡ[1] ಮತ್ತು ವಿಜಯಲಕ್ಷ್ಮೀ ಕಟ್ಟಿ[2]**
[1]ಸಹಾಯಕ ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಸರಕಾರಿ ಪದವಿ ಮಹಾವಿದ್ಯಾಲಯ, ಸಿಂಧನೂರು.
[2]ಉಪನ್ಯಾಸಕರು, ಸರಕಾರಿ ಪದವಿ ಮಹಾವಿದ್ಯಾಲಯ, ಸಿಂಧನೂರು

***Abstract:***
*ಪುರ (PURA) ಯೋಜನೆಯು ಭಾರತ ಸರ್ಕಾರವು 2003 ರಲ್ಲಿ ಪ್ರಾರಂಭಿಸಿದ ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮವಾಗಿದೆ. ಈ ಯೋಜನೆಯ ಪ್ರಮುಖ ಉದ್ದೇಶ ಗ್ರಾಮೀಣ ಪ್ರದೇಶಗಳಿಗೆ ನಗರ ಸೌಕರ್ಯಗಳನ್ನು ಒದಗಿಸುವುದಾಗಿದೆ. ಪುರ (PURA-Provision of Urban Amenities to Rural Areas) ಯೋಜನೆಯು ಗ್ರಾಮೀಣ ಪ್ರದೇಶಗಳ ಜೀವನದ ಗುಣಮಟ್ಟವನ್ನು ಸುಧಾರಿಸುವ ಸಲುವಾಗಿ ನಗರ ಪ್ರದೇಶದ ಮೂಲಸೌಕರ್ಯಗಳನ್ನು ಒದಗಿಸುವ ಗುರಿಯನ್ನು ಹೊಂದಿದೆ. ಗ್ರಾಮೀಣ ಜನರಿಗೆ ಆರ್ಥಿಕ ಅವಕಾಶಗಳನ್ನು ಸೃಷ್ಟಿಸಲು ಮತ್ತು ಗ್ರಾಮೀಣ–ನಗರಗಳ ನಡುವಿನ ಅಂತರವನ್ನು ಕಡಿಮೆ ಮಾಡಲು ಈ ಕಾರ್ಯಕ್ರಮವನ್ನು ವಿನ್ಯಾಸಗೊಳಿಸಲಾಗಿದೆ.*

***Keywords:*** *ಪುರ (PURA), ಗ್ರಾಮೀಣಾಭಿವೃದ್ಧಿ, ಗ್ರಾಮೀಣ ಪ್ರದೇಶ, ಮೂಲ ಸೌಕರ್ಯ, ಗುಣಮಟ್ಟದ ಜೀವನ.*

## ಪೀಠಿಕೆ

ಗ್ರಾಮೀಣ ಪ್ರದೇಶಗಳಲ್ಲಿ ಸ್ವಾವಲಂಬಿ ಪರಿಸರ ವ್ಯವಸ್ಥೆಯನ್ನು ರೂಪಿಸುವುದು ಪುರ ಯೋಜನೆಯ ಮೂಲ ಉದ್ದೇಶವಾಗಿದೆ. ಪ್ರಮುಖವಾಗಿ ಭೌತಿಕ, ವಿದ್ಯುನ್ಮಾನ ಮತ್ತು ಜ್ಞಾನದ ಮೂಲಸೌಕರ್ಯ– ಈ ಮೂರು ರೀತಿಯ ಮೂಲಸೌಕರ್ಯಗಳನ್ನು ಒದಗಿಸುವ ಮೂಲಕ ಅಭಿವೃದ್ಧಿ ಸಾಧಿಸಲಾಗುತ್ತದೆ. ಭೌತಿಕ ಮೂಲಸೌಕರ್ಯವು ರಸ್ತೆಗಳು, ನೀರು ಸರಬರಾಜು, ನೈರ್ಮಲ್ಯ ಸೌಲಭ್ಯಗಳು ಮತ್ತು ವಿದ್ಯುದ್ದೀಕರಣಗಳನ್ನು ಒಳಗೊಂಡಿದೆ. ಎಲೆಕ್ಟ್ರಾನಿಕ್ ಮೂಲ ಸೌಕರ್ಯವು ದೂರಸಂಪರ್ಕ ಸೌಲಭ್ಯಗಳು ಮತ್ತು ಇಂಟರ್ನೆಟ್ ಸಂಪರ್ಕವನ್ನು ಒಳಗೊಂಡಿದೆ. ಜ್ಞಾನದ ಮೂಲಸೌಕರ್ಯವು ಶಿಕ್ಷಣ, ಆರೋಗ್ಯ ಮತ್ತು ಕೌಶಲ್ಯ ಅಭಿವೃದ್ಧಿಯನ್ನು ಒಳಗೊಂಡಿರುತ್ತದೆ.

ಪುರ ಯೋಜನೆಯು 5 ರಿಂದ 10 ಕಿಲೋಮೀಟರ್ ವ್ಯಾಪ್ತಿಯಲ್ಲಿರುವ ಗ್ರಾಮ ಸಮೂಹಗಳನ್ನು ಗುರುತಿಸಿ, ಆ ಸಮೂಹಗಳಲ್ಲಿ ಉದ್ಯೋಗವಕಾಶ ಹಾಗೂ ಹೂಡಿಕೆಗಳನ್ನು ಸೃಷ್ಟಿಸುವ ಸಲುವಾಗಿ ಗ್ರಾಮೀಣ ಪ್ರದೇಶಗಳ ಸಮೂಹಗಳನ್ನು ಗುರುತಿಸಿದೆ. ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಮತ್ತು ಹೂಡಿಕೆಯನ್ನು ಆಕರ್ಷಿಸುವ ಉದ್ದೇಶದಿಂದ ಈ ಕ್ಲಸ್ಟರ್‌ಗಳನ್ನು ಆರ್ಥಿಕ ಕೇಂದ್ರಗಳಾಗಿ ಅಭಿವೃದ್ಧಿಪಡಿಸಲಾಗುತ್ತದೆ. ಈ ಕ್ಲಸ್ಟರ್‌ಗಳನ್ನು

***Please cite this article as:*** ಸಂಗನಗೌಡ ಶಿವನಗೌಡ & ವಿಜಯಲಕ್ಷ್ಮೀ ಕಟ್ಟಿ. (2024). ಗ್ರಾಮೀಣಾಭಿವೃದ್ಧಿಯಲ್ಲಿ ಪುರ (PURA) ಯೋಜನೆಯ ಪಾತ್ರ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 2(6), 35–38.

ಅಭಿವೃದ್ಧಿಪಡಿಸಲು ಖಾಸಗಿ ವಲಯದ ಕಂಪನಿಗಳು, ಎನ್‌ಜಿಓಗಳು ಮತ್ತು ಸ್ಥಳೀಯ ಸಮುದಾಯಗಳು ಸೇರಿದಂತೆ ವಿವಿಧ ಪಾಲುದಾರರೊಂದಿಗೆ ಸರ್ಕಾರವು ಕೆಲಸ ಮಾಡುತ್ತದೆ.

PURA ಯೋಜನೆಯು ಮೂರು ಘಟಕಗಳನ್ನು ಹೊಂದಿದೆ, ಅವುಗಳೆಂದರೆ, ಭೌತಿಕ ಸಂಪರ್ಕ, ಎಲೆಕ್ಟ್ರಾನಿಕ್ ಸಂಪರ್ಕ ಮತ್ತು ಜ್ಞಾನ ಸಂಪರ್ಕ. ಭೌತಿಕ ಸಂಪರ್ಕವು ರಸ್ತೆಗಳು, ಸೇತುವೆಗಳು ಮತ್ತು ಇತರ ಮೂಲಭೂತ ಮೂಲಸೌಕರ್ಯಗಳ ನಿರ್ಮಾಣವನ್ನು ಒಳಗೊಂಡಿದೆ. ಎಲೆಕ್ಟ್ರಾನಿಕ್ ಸಂಪರ್ಕವು ಇಂಟರ್ನೆಟ್ ಸಂಪರ್ಕ ಮತ್ತು ದೂರಸಂಪರ್ಕ ಸೌಲಭ್ಯಗಳನ್ನು ಒದಗಿಸುವುದನ್ನು ಒಳಗೊಂಡಿರುತ್ತದೆ. ಜ್ಞಾನದ ಸಂಪರ್ಕವು ಶಿಕ್ಷಣ, ಆರೋಗ್ಯ ಮತ್ತು ಕೌಶಲ್ಯಾಭಿವೃದ್ಧಿ ಕಾರ್ಯಕ್ರಮ ಗಳನ್ನು ಒಳಗೊಂಡಿದೆ.

ಈ ಯೋಜನೆಯು ಗ್ರಾಮೀಣ ಪ್ರದೇಶಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವಲ್ಲಿ ಮತ್ತು ಆರ್ಥಿಕ ಅವಕಾಶಗಳನ್ನು ಸೃಷ್ಟಿಸುವಲ್ಲಿ ಯಶಸ್ವಿಯಾಗಿದೆ. ಪುರ ಯೋಜನೆಯಿಂದಾಗಿ ಅನೇಕ ಗ್ರಾಮೀಣ ಪ್ರದೇಶಗಳು ತಮ್ಮ ಜೀವನಮಟ್ಟದಲ್ಲಿ ಸುಧಾರಣೆ ಕಂಡಿವೆ. ಈ ಕಾರ್ಯಕ್ರಮವು ಗ್ರಾಮೀಣ ಪ್ರದೇಶಗಳಲ್ಲಿ ಆರ್ಥಿಕ ಅವಕಾಶಗಳನ್ನು ಸೃಷ್ಟಿಸುವ ಮೂಲಕ ಗ್ರಾಮೀಣ–ನಗರ ಪ್ರದೇಶಗಳ ನಡುವಿನ ಅಂತರವನ್ನು ಕಡಿಮೆ ಮಾಡಲು ಸಹಾಯ ಮಾಡಿದೆ. ಪುರ ಯೋಜನೆಯನ್ನು ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮದ (UNDP) ಯಶಸ್ವಿ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳ ಪಟ್ಟಿಯಲ್ಲಿ ಸೇರಿಸಲಾಗಿದೆ. ಈ ಯೋಜನೆಯು ಚೀನಾ ಸೇರಿದಂತೆ ಇತರ ದೇಶಗಳಿಂದ ಮೆಚ್ಚುಗೆ ಪಡೆದಿದೆ.

**ಗ್ರಾಮೀಣಾಭಿವೃದ್ಧಿ ಮತ್ತು ಪುರ ಯೋಜನೆ**

ಗ್ರಾಮೀಣಾಭಿವೃದ್ಧಿ ಎಂದರೆ ಕೇವಲ ಕೃಷಿಯ ಅಭಿವೃದ್ಧಿ ಮಾತ್ರವಾಗಿರದೆ ಗ್ರಾಮ ಸಮುದಾಯದ ಸರ್ವಾಂಗೀಣ ಅಭಿವೃದ್ಧಿಯಾಗಿರುತ್ತದೆ. ಇದು ಗ್ರಾಮಸ್ಥರ ಜೀವನ ಮಟ್ಟವನ್ನು ಸುಧಾರಿಸಲು ಕೈಗೊಳ್ಳಲಾದ ಯೋಜಿತ ಕಾರ್ಯಕ್ರಮಗಳ ಪರಿಕಲ್ಪನೆಯಾಗಿದೆ. ಯಾವುದೇ ದೇಶದ ಸಮಗ್ರ ಅಭಿವೃದ್ಧಿಯನ್ನು ಕೇವಲ ರಾಷ್ಟ್ರೀಯ ಆದಾಯ ಇಲ್ಲವೇ ವಿಜ್ಞಾನ–ತಂತ್ರಜ್ಞಾನಗಳ ಅಭಿವೃದ್ಧಿಯಿಂದ ಮಾತ್ರ ಅಳೆಯಲಾಗದು. ಬದಲಿಗೆ ರಾಷ್ಟ್ರವೊಂದರಲ್ಲಿರುವ ಜನರ ಅಭಿವೃದ್ಧಿ ಮಟ್ಟ ಮತ್ತು ಜನರ ಜೀವನಮಟ್ಟವನ್ನು ಕೂಡ ಪರಿಗಣಿಸಬೇಕಿದೆ. ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಸ್ವಾತಂತ್ರ್ಯ ಬಂದಾಗಿನಿಂದಲೂ ವಿವಿಧ ರೀತಿಯ ನಾವೀನ್ಯ ಗ್ರಾಮೀಣಾಭಿವೃದ್ಧಿ ಯೋಜನೆಗಳನ್ನು ಅನಿಷ್ಠಾನಕ್ಕೆ ತರುತ್ತಲಿದ್ದು, ಗ್ರಾಮೀಣ ಅಭಿವೃದ್ಧಿಯಲ್ಲಿ ನಿರೀಕ್ಷಿಸಿದ ಪ್ರಮಾಣದಲ್ಲಿ ಅಲ್ಲದಿದ್ದರೂ ಸಾಕಷ್ಟು ಬದಲಾವಣೆಯನ್ನು ತಂದಿದೆ.

**ಗ್ರಾಮೀಣ ಪ್ರದೇಶಗಳಿಗೆ ನಗರ ಸೌಲಭ್ಯ ನೀಡಿಕೆ ಯೋಜನೆ (PURA)**

ಪುರ ಯೋಜನೆಯು ಮಾಜಿ ರಾಷ್ಟ್ರಪತಿ ಹಾಗೂ ಭಾರತೀಯ ಹೆಮ್ಮೆಯ ವಿಜ್ಞಾನಿ ಡಾ. ಎ.ಪಿ.ಜೆ ಅಬ್ದುಲ್ ಕಲಾಂ ಅವರ ಪರಿಕಲ್ಪನೆಯಾಗಿದೆ. ಹಳ್ಳಿಗಳ ದೇಶವಾಗಿರುವ ಭಾರತದಲ್ಲಿ ಹಳ್ಳಿಗಳು ಹಾಗೂ ನಗರಗಳ ನಡುವೆ ಇರುವ ಅಂತರವನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ ಈ ಯೋಜನೆ ಅವಶ್ಯಕವಾಗಿದೆ ಎಂದು ಹೇಳಿದ್ದರು. ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ಅವರು 2003ರ ಗಣರಾಜ್ಯೋತ್ಸವದಂದು ಈ ಯೋಜನೆಯನ್ನು ಪ್ರಸ್ತಾಪಿಸಿದರು. ಈ ಯೋಜನೆಯ ಮಹತ್ವವನ್ನು ಮನಗಂಡ ಆಗಿನ ಪ್ರಧಾನಿ ಶ್ರೀ ಅಟಲ್ ಬಿಹಾರಿ ವಾಜಪೇಯಿ ಯವರು 2003ರ ಸ್ವಾತಂತ್ರ್ಯ ದಿನಾಚರಣೆಯಂದು ತಮ್ಮ ಭಾಷಣದಲ್ಲಿ ಈ ಯೋಜನೆಯನ್ನು ಪ್ರಸ್ತಾಪ ಮಾಡಿ, ದಿನಾಂಕ 1–3–2004 ರಂದು ಜಾರಿಗೆ ತಂದರು. ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯ (MORD) ಮೂರು ವರ್ಷಗಳವರೆಗೆ (2004–05 ರಿಂದ 2006–07) ಪ್ರಾಯೋಗಿಕ ಆಧಾರದ ಮೇಲೆ ಏಳು

ಕ್ಲಸ್ಟರ್‌ಗಳಲ್ಲಿ ಈ ಯೋಜನೆಯನ್ನು ಜಾರಿಗೆ ತರಲಾಯಿತು.

ಹನ್ನೊಂದನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ, ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್ ಮತ್ತು ಆರ್ಥಿಕ ವ್ಯವಹಾರಗಳ ಇಲಾಖೆಯ ಬೆಂಬಲದೊಂದಿಗೆ ಪುರ ಯೋಜನೆಯನ್ನು ಕೇಂದ್ರ ಸರ್ಕಾರದ ಯೋಜನೆಯಾಗಿ ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯ ಗ್ರಾಮ ಪಂಚಾಯತ್‌ಗಳು ಮತ್ತು ಸಾರ್ವಜನಿಕ ಖಾಸಗಿ ಸಹಭಾಗಿತ್ವ (PPP) ಮಾದರಿಯಡಿಯಲ್ಲಿ ಈ ಯೋಜನೆಯನ್ನು ಜಾರಿಗೊಳಿಸಿತು.

**ಪುರ ಯೋಜನೆಯ ರೂಪರೇಷಗಳು**

ಪುರ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕೆಂಬ ನಿಟ್ಟಿನಲ್ಲಿ ಭೌಗೋಳಿ ಪರಿಸರಕ್ಕನುಗುಣವಾಗಿ ನಾಲ್ಕು ವಿಭಾಗಗಳನ್ನಾಗಿ ವಿಂಗಡಿಸಿಕೊಳ್ಳಲಾಯಿತು. ಅವುಗಳೆಂದರೆ ಸಮತಟ್ಟಿನ ಭೂಭಾಗ, ಗುಡ್ಡಗಾಡಿನ ಭೂಭಾಗ, ಕರಾವಳಿ ಪ್ರದೇಶ ಮತ್ತು ಮರುಭೂಮಿ ಭೂಭಾಗ. ಸಮತಟ್ಟಿನ ಭೂಭಾಗ ಹಾಗೂ ಕರಾವಳಿ ಭೂಭಾಗಗಳಲ್ಲಿ ಕೈಗೆತ್ತಿಕೊಳ್ಳಬಹುದಾದ ಪುರ ಯೋಜನೆಯು 20,000 ರಿಂದ 50,000 ಜನಸಂಖ್ಯೆಯಿಂದ ಕೂಡಿದ ಮತ್ತು 20 ರಿಂದ 30 ಗ್ರಾಮಗಳನ್ನೊಳಗೊಂಡ ಗುಂಪುಗಳನ್ನು ಒಳಗೊಂಡಿರುತ್ತದೆ. ಅದೇ ರೀತಿ ಗುಡ್ಡಗಾಡಿನ ಭೂಭಾಗ ಹಾಗೂ ಮರುಭೂಮಿ ಭೂಭಾಗಗಳ ಪುರ ಯೋಜನೆಯು 7500 ರಿಂದ 15000 ಜನರನ್ನು ಒಳಗೊಂಡ ಮತ್ತು 30 ರಿಂದ 50 ಗ್ರಾಮಗಳಿಂದ ಕೂಡಿದ ಹಳ್ಳಿ ಗುಂಪು ಪ್ರದೇಶವನ್ನು ಹೊಂದಿರುತ್ತದೆ.

**ಪುರ ಯೋಜನೆಯ ಉದ್ದೇಶ ಹಾಗೂ ಸಾಧನೆ**

ಗ್ರಾಮೀಣ ಪ್ರದೇಶಗಳಲ್ಲಿ ನಗರ ಸೌಕರ್ಯಗಳು ಮತ್ತು ಜೀವನೋಪಾಯದ ಅವಕಾಶಗಳನ್ನು ಒದಗಿಸುವುದರ ಗ್ರಾಮ ಮತ್ತು ನಗರಗಳ ನಡುವಿನ ಅಂತರವನ್ನು ಕಡಿಮೆ ಮಾಡುವುದು, ನಗರಗಳಲ್ಲಿ ಲಭ್ಯವಿರುವ ಹಲವಾರು ಬಗೆಯ ಆಧುನಿಕ ಸೌಲಭ್ಯಗಳನ್ನು ಹಳ್ಳಿಗಳಿಗೆ ವಿಸ್ತರಿಸಿ ಹಳ್ಳಿ ಮತ್ತು ನಗರಗಳ ಅಂತರ ಕಡಿಮೆಗೊಳಿಸುವುದು, ರಸ್ತೆ,ಸಾರಿಗೆ, ವಿದ್ಯುತ್ ಸಂಪರ್ಕ, ಉತ್ತಮ ಗುಣಮಟ್ಟದ ಶಿಕ್ಷಣ ಸಂಸ್ಥೆಗಳ ಸ್ಥಾಪನೆ, ಮಾರುಕಟ್ಟೆ ಜೋಡಣೆ, ದೂರ ಸಂಪರ್ಕ ಮತ್ತು ಅಂತರಜಾಲ ಮಾಹಿತಿ ತಂತ್ರಜ್ಞಾನ ಸೇವೆಯನ್ನು ಒದಗಿಸುವುದು, ತರಬೇತಿ ನೀಡುವ ಸಂಸ್ಥೆಗಳಿಗೆ ಸೇವಾ ಸೌಲಭ್ಯಗಳನ್ನು ಒದಗಿಸುವುದು, ಶುದ್ಧ ನೀರಿನ ಘಟಕವನ್ನು ಸ್ಥಾಪಿಸುವುದು, ವಿದ್ಯಾಸಂಸ್ಥೆಗಳನ್ನು ಉನ್ನತಿಕರಿಸುವುದು, ಆರೋಗ್ಯ ಸೌಲಭ್ಯಗಳನ್ನು ಕೂಡ ಮೇಲ್ಮಟ್ಟಕ್ಕೆ ಎತ್ತರಿಸುವುದು, ನೀರು ಮತ್ತು ಒಳಚರಂಡಿ, ಗ್ರಾಮದ ಬೀದಿಗಳ ನಿರ್ಮಾಣ ಮತ್ತು ನಿರ್ವಹಣೆ, ಒಳಚರಂಡಿ, ಘನ ತ್ಯಾಜ್ಯ ನಿರ್ವಹಣೆ, ಕೌಶಲ್ಯ ಅಭಿವೃದ್ಧಿ ಯೋಜನೆ ಮತ್ತು ಆರ್ಥಿಕ ಚಟುವಟಿಕೆಗಳ ಅಭಿವೃದ್ಧಿ ಸಾಧಿಸುವುದು ಈ ಯೋಜನೆಯ ಉದ್ದೇಶವಾಗಿದೆ.

**ಮೂಲ ಸೌಕರ್ಯ ಒದಗಿಸುವ ರೀತಿ (MoRD ಯೋಜನೆಗಳ ಅಡಿಯಲ್ಲಿ)**

ಈಗಾಗಲೇ ಅಸ್ತಿತ್ವದಲ್ಲಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರಿ ಯೋಜನೆಗಳ ಆಧಾರದಲ್ಲಿ ಗುರುತಿಸಲ್ಪಟ್ಟ ಹಳ್ಳಿಗಳಿಗೆ ಹಲವಾರು ಬಗೆಯ ಯೋಜನೆಯನ್ನು ಗುರುತಿಸಿ ಅಭಿವೃದ್ಧಿಗಾಗಿ ಬಳಸಿಕೊಳ್ಳಲಾಗಿದೆ. ಸ್ವರ್ಣಜಯಂತಿ ಗ್ರಾಮ ಸ್ವರೋಜ್ಗಾರ್ ಯೋಜನೆಯಂತಹ ಯೋಜನೆಗಳನ್ನು ಹಳ್ಳಿ ಪ್ರದೇಶಗಳಲ್ಲಿ ಸ್ವಯಂ ಉದ್ಯೋಗಾವಕಾಶಗಳನ್ನು ಕಲ್ಪಿಸಲು ಬಳಸಿಕೊಳ್ಳಬಹುದಾಗಿದೆ.

2001ರ ಜನಗಣತಿಯಂತೆ ದೇಶಾದ್ಯಂತ ಇರುವ 593 ಜಿಲ್ಲೆಗಳಲ್ಲಿ 5 ಲಕ್ಷಕ್ಕೂ ಅಧಿಕ ಜನಸಂಖ್ಯೆಯುಳ್ಳ ಜಿಲ್ಲಾ ಕೇಂದ್ರಗಳನ್ನು ಹಾಗೂ ಗೋವಾ ಸಹಿತ ಎಲ್ಲಾ ಕೇಂದ್ರಾಡಳಿತ ಪ್ರದೇಶಗಳನ್ನು ಹೊರತುಪಡಿಸಿ, ಬೃಹತ್ ನಗರಗಳಿಗೆ ಸಮೀಪವಿರುವ 3 ಜಿಲ್ಲೆಗಳನ್ನು ಬಿಟ್ಟು ಮಿಕ್ಕುಳಿದ 505 ಜಿಲ್ಲೆಗಳಲ್ಲಿ ಈ ಯೋಜನೆಯಡಿ ಸೌಲಭ್ಯ ಕಲ್ಪಿಸಲು ಅವಕಾಶವಿದೆ.

ಈ ಯೋಜನೆಯಡಿ ಮುಖ್ಯವಾಗಿ ನೀರು, ವಿದ್ಯುತ್, ರಸ್ತೆ, ಶಾಲೆ, ದೂರವಾಣಿ ಸೇರಿದಂತೆ ಮೂಲಭೂತ ಸೌಕರ್ಯಗಳ ಬಗ್ಗೆ ಹೆಚ್ಚಿನ ಗಮನ ಗಮನಹರಿಸಲಾಗುವುದು. ಪ್ರತಿ ಗ್ರಾಮಕ್ಕೂ 1 ಕೋಟಿ ರುಪಾಯಿಗಳನ್ನು ಖರ್ಚು ಮಾಡಲು ಉದ್ದೇಶಿಸಲಾಗಿತ್ತು.

**ಪುರ ಯೋಜನೆಯ ವಿಶೇಷತೆಗಳು**

ರಾಜ್ಯ ಸರ್ಕಾರದ ಬೆಂಬಲದೊಂದಿಗೆ ಗ್ರಾಮ ಪಂಚಾಯತ್‌ಗಳು ಮತ್ತು ಖಾಸಗಿ ವಲಯದ ಪಾಲುದಾರರ ನಡುವಿನ PPP ಚೌಕಟ್ಟಿನ ಅಡಿಯಲ್ಲಿ ಯೋಜನೆಯ ಉದ್ದೇಶಗಳನ್ನು ಸಾಧಿಸಲಾಗುತ್ತದೆ. ಈ ಯೋಜನೆಯು ಕೇಂದ್ರ ವಲಯದ ಯೋಜನೆಯಾಗಿದೆ. ಖಾಸಗಿ ವಲಯವು ಆರ್ಥಿಕ ಕಾರ್ಯಸಾಧ್ಯತೆಯ ಪರಿಗಣನೆಯ ಮೇಲೆ ಯೋಜನೆಯನ್ನು ಅನುಷ್ಠಾನಗೊಳಿಸುತ್ತದೆ. ಒಟ್ಟಾರೆ ಈ ಯೋಜನೆಯನ್ನು ಸಮಗ್ರ ಗ್ರಾಮೀಣಾಭಿವೃದ್ಧಿಗೆ ಅನುಕೂಲವಾಗುಂತೆ ವಿನ್ಯಾಸಗೊಳಿಸಲಾಗಿತ್ತು. ನಂತರ 2012 ರಂದು ಪುರ ಯೋಜನೆ ಪುನರ್‌ರಚಿಸಿ ಪ್ರಾರಂಭಿಸಲಾಯಿತು. ಇದು ಪ್ರಮುಖವಾಗಿ ನೀರು ಸರಬರಾಜು, ನೈರ್ಮಲ್ಯ ಮತ್ತು ಭೌತಿಕ ಮೂಲಸೌಕರ್ಯಗಳತ್ತ ಗಮನ ಹರಿಸಲು ಒತ್ತು ನೀಡಲಾಯಿತು.

**ಉಪಸಂಹಾರ**

ಪುರ ಯೋಜನೆಯು ವಿನೂತನ ಕಾರ್ಯಕ್ರಮವಾಗಿದ್ದು, ಗ್ರಾಮೀಣ ಪ್ರದೇಶಗಳಿಗೆ ಮೂಲಭೂತ ಸೌಕರ್ಯಗಳು ಮತ್ತು ಮೂಲಸೌಕರ್ಯಗಳನ್ನು ಒದಗಿಸಲು ಸಹಾಯ ಮಾಡಿದೆ. ಇದು ಆರ್ಥಿಕ ಅವಕಾಶಗಳನ್ನು ಸೃಷ್ಟಿಸಿದೆ ಮತ್ತು ಗ್ರಾಮೀಣ–ನಗರ ವಿಭಜನೆಯನ್ನು ಕಡಿಮೆ ಮಾಡಲು ಸಹಾಯ ಮಾಡಿದೆ. ಈ ಕಾರ್ಯಕ್ರಮವು ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಜನರ ಜೀವನದ ಗುಣಮಟ್ಟವನ್ನು ಸುಧಾರಿಸುವಲ್ಲಿ ಯಶಸ್ವಿಯಾಗಿದೆ ಮತ್ತು ಅಂತರರಾಷ್ಟ್ರೀಯ ಮನ್ನಣೆಯನ್ನು ಪಡೆದಿದೆ. ಪುರ ಯೋಜನೆಯು ಭಾರತಕ್ಕೆ ಅಂತರ್ಗತ ಮತ್ತು ಸುಸ್ಥಿರ ಭವಿಷ್ಯವನ್ನು ರಚಿಸುವ ಪ್ರಮುಖ ಹೆಜ್ಜೆಯಾಗಿದೆ.

**ಪರಾಮರ್ಶನ ಗ್ರಂಥಗಳು**


- ಬೈರಪ್ಪ ಕೆ. (1992). ಗ್ರಾಮೀಣ ಸಮಾಜಶಾಸ್ತ್ರ. ಸುರೇಶ್ ಪಬ್ಲಿಕೇಷನ್.
- ರಾಜಶೇಖರ್ ಎಸ್. (2013). ಗ್ರಾಮೀಣ ಸಮಾಜಶಾಸ್ತ್ರ. ಮೈಸೂರು ಬುಕ್‌ಹೌಸ್.
- Acharya, M. (2022, September 30). *PURA Scheme: Launch Year, Objectives, features, Amenities provided*. Cleartax. https://cleartax.in/s/pura-scheme
- Kakati, B. K. (2021). APJ Abdul Kalam & Srijan Pal Singh, Target 3 Billion (PURA: Innovative Solutions towards Sustainable Development). *Journal of Land and Rural Studies*, *9*(2), 368–371. https://doi.org/10.1177/23210249211005246
- *PURA Strategy – an initiative for rural development*. (n.d.). https://ictconnect.in/General/Article.aspx?articletitle=PURA%20Strategy%20%E2%80%93%20An%20Initiative%20for%20Rural%20Development